ಸಂಘದಲ್ಲಿ ಡಿಫಾಲ್ಕೇಷನ್ ಆಗಿಲ್ಲವೆಂದು ಹೇಳಿದ್ದಾರೆ. Rice dealings ನಲ್ಲಿ suspense account ನಲ್ಲಿ ಆರೇಳು ಸಾವಿರ ರೂಪಾಯಿಗಳ ಜಮಾ ಮತ್ತು ಖರ್ಚು ಇಲ್ಲವೆಂಬುದು ಗೊತ್ತಿದೆಯೇ?

ಶ್ರೀ ಮಾಲ ಮರಿಯಪ್ಪ.—ಹಾಗೇನೂ ಇಲ್ಲ. 8,157½ ಪಲ್ಲ ಅಕ್ಕಿಯನ್ನು ಮಾರಾಟಮಾಡಿದರು, ಸುಮಾರು ಹತ್ತೂವರೆಪಲ್ಲ shortage ಬಂತು ಎಂದು ಹೇಳಿದರು. ಇದು ಸೇಕಡ ಒಂದಕ್ಕಿಂತಲೂ—handling charges ಮತ್ತು deficit—ಕಡಮೆಯಾಗುವುದರಿಂದ write off ಮಾಡಬಹುದು ಎಂದು ಮಾಡಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಹತ್ತು ಪಲ್ಲ ಅಕ್ಕಿಯ ಬೆಲೆ ಎಷ್ಟಾಗುತ್ತದೆ?

ಶ್ರೀ ಮಾಲ ಮರಿಯಪ್ಪ.—ಅಗಿನ ದರದ ಪ್ರಕಾರ ಲೆಕ್ಕ ಹಾಕಿ ಹೇಳಬೇಕಾಗುತ್ತದೆ. ಬಹುಶಃ 400-500 ರೂಪಾಯಿಗಳವರೆಗೆ ಆಗಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಸರ್ಕಾರದವರು financial aid ಎಂದು ಈ ಸೊಸೈಟಿಗೆ 45 ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ನಿಜವೇ?

ಶ್ರೀ ಮಾಲ ಮರಿಯಪ್ಪ.—ಹಾದು; ಅದಕ್ಕೆ ವಿಶೇಷವಾದ ರಿಯಾಯಿತಿಗಳನ್ನೇನೂ ಕೊಟ್ಟಿಲ್ಲ. ಸಂಸ್ಥಾನದ ಎಲ್ಲ ತಾಲ್ಲೂಕುಗಳಲ್ಲಿರತಕ್ಕ M.P.C.S. ಮಾರ್ಕೆಟಿಂಗ್ ಸೊಸೈಟಿಗಳಿಗೆ 25 ಸಾವಿರ ರೂಪಾಯಿಗಳನ್ನು ಕೊಟ್ಟಂತೆ ಹಣ ಮತ್ತು ಇತರ ಸಹಾಯಗಳನ್ನು ಕೊಟ್ಟಿದೆ.

1-30 P.M.

ಶ್ರೀ ಕೆ. ಎಲ್. ನರಸಿಂಹಯ್ಯ.—ಹ್ಯಾಂಡ್ಲಿಂಗಿ ಗೋಸ್ಕರ ಶೇಕಡ ಎರಡೂವರೆಯಷ್ಟಿದೆ ಎನ್ನುವುದರ ಬಗೆಗೆ ಸರಕಾರದ ಆರ್ಡರಿದೆಯಲ್ಲವೇ?

ಶ್ರೀ ಮಾಲ ಮರಿಯಪ್ಪ.—ಒಂದು ಪರ್ಸೆಂಟು ಷಾರ್ಜೇಜು ಬಂದರೆ ಅದನ್ನು ಹ್ಯಾಂಡ್ಲಿಂಗ್ ಚಾರ್ಜಸ್ ಎಂದು ಪರಿಗಣಿಸಿ ರೈಟ್ ಆಫ್ ಮಾಡಬಹುದು ಎಂದಿದೆ. ಇದರ ಪ್ರಕಾರ ಒಂದು ಪರ್ಸೆಂಟಿಗೂ ಕಡಿಮೆ ಬಂದಿದೆ. ಸುಮಾರು ಕಾಲು ಪರ್ಸೆಂಟು ಎಂದು ಹೇಳಬಹುದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಈ ಸೊಸೈಟಿಯಲ್ಲಿದ್ದ ಲಾರಿಯನ್ನು ಹೈರುಮಾಡಿರತಕ್ಕ ಸಂದರ್ಭದಲ್ಲಿ ಬಂದಂತಹ ಸುಮಾರು ಎಂಟು ಹತ್ತು ಸಾವಿರ ರೂಪಾಯಿಗಳು ಸೊಸೈಟಿಗೆ ಬಾರದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲ ಮರಿಯಪ್ಪ.—ಇಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಅದಕ್ಕೋಸ್ಕರ ಒಂದು ಎನ್‌ಕ್ವೈರಿ ಕಮಿಟಿಯನ್ನು ಮಾಡುತ್ತೀರಾ?

ಶ್ರೀ ಮಾಲ ಮರಿಯಪ್ಪ.—ಅದನ್ನು ತಾವು ಮಾಡಬೇಕೆಂದು ಹೇಳಿದರೆ ಮಾಡೋಣ.

Measure to stop seepage of water from Vajra Project in Hosadurga Taluk.

*Q.—129. Sri B. S. SHANKARAPPA (Hosadurga).—

Will the Government be pleased to state:—

(*a*) whether it has come to their notice that water is seeping out behind the tank bund of the Vajra Project in Hosadurga taluk;

(*b*) if so, whether they propose to take suitable measures with a view to preventing the above seepage?

A.—Sri H. M. CHANNABASAPPA (Minister for Public Works and Electricity).—

(*a*) Yes; to a small extent.

(*b*) Yes.

ಶ್ರೀ ಬಿ. ಎಸ್. ಶಂಕರಪ್ಪ.—ಈ ಕೆರೆಗಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ರಿಪೇರಿ ಮಾಡಿದ್ದರೂಕೂಡ ಈ ಕೆರೆಯಲ್ಲಿ ನೀರು ತುಂಬಿದ ಎಂಟು ಹತ್ತು ದಿನಗಳಲ್ಲೇ ಸ್ವಲ್ಪವೂ ನಿಲ್ಲುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

†Sri M. N. NAGHNOOR.—The tank was repaired in the year 1949. The report shows that there is no leakage and that the tank is in perfect condition.

ಶ್ರೀ ಬಿ. ಎಸ್. ಶಂಕರಪ್ಪ.—ಸರಕಾರದವರು ಹೀಗೆ ಉತ್ತರ ಹೇಳಿದರೆ ಏನು ಮಾಡುವುದು ಸ್ವಾಮಿ?

ಅಧ್ಯಕ್ಷರು.—ಈಗ ಪ್ರಶ್ನೆ ಇರುವಂತೆ ಅವರು ಉತ್ತರವನ್ನು ಸರಕಾರದ ಪರವಾಗಿ ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚಿನ ವಿವರಗಳು ತಮಗೇ ಗೊತ್ತಿರಬಹುದು. ಆದರೆ ಮತ್ತೆ ಮತ್ತೆ ಅದನ್ನೇ ಕೇಳಿದರೆ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಕೆರೆ ತುಂಬಿಬಿಟ್ಟು ಒಂದು ವಾರದೊಳಗೇ ನೀರು ಇಲ್ಲ ನಿಲ್ಲದೇಇರುವುದರಿಂದ ಇಲ್ಲಗೆ ಶ್ರೀರಾಂಪುರದ ಫೀಡರು ಚಾನಲ್ಲಿನಿಂದ ನೀರನ್ನು ತಂದರೂ ಉಪಯೋಗವಾಗದೆ ಫನಲೆಲ್ಲ ಹಾಳಾಗಿಹೋಯಿತು ಎಂದು ಸರಕಾರಕ್ಕೇನಾದರೂ ಕಂಪ್ಲೇಂಟನ್ನು ಕೊಟ್ಟಿದ್ದಾರೆಯೇ?

Sri M. N. NAGHNOOR.—Reports to that extent have not been received.

Auction sale of S. No. 11 in Hosahalli Village in Hosadurga Taluk.

*Q.—133. Sri B. S. SHANKARAPPA (Hosadurga).—

Will the Government be pleased to state:—

(*a*) whether it has come to their notice that S. No. 11 of Hosahalli village of Kasaba Hobli, Hosadurga Taluk, was sold in open auction and the sale

† Indicates that the remarks or speeches have not been revised by the member concerned.